OS No. 75/2017 PW-1

**<u>ದಿನಾಂಕ 28.08.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ ಃ</u>**

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-15 ಎಂದು, ಕೊರಿಯರ್ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-16 ಎಂದು, ಪ್ರತಿವಾದಿಗೆ ಕಳುಹಿಸಿದ ನೋಟೀಸ್ ಜಾರಿಯಾಗದೇ ವಾಪಸ್ಸಾಗಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ಇನ್ನೊಂದು ಕವರ್ ಇದ್ದು, ಅದನ್ನು ತೆಗೆದು ನೋಡಲಾಗಿ ಅದರಲ್ಲಿ ವಾದಿಯು ಪ್ರತಿವಾದಿಗೆ ಕಳುಹಿಸಿದ reminder 3 ನೋಟೀಸ್ ಮತ್ತು 25 ಸಾವಿರ ರೂಪಾಯಿಯ ಚೆಕ್ ನ ಜೆರಾಕ್ಸ್ ಪ್ರತಿಯನ್ನು ಸದರಿ ಅಂಚೆ ಲಕೋಟೆಗಳನ್ನು ಒಟ್ಟಾರೆಯಾಗಿ ನಿಪಿ-17 ಎಂದು ಮತ್ತು ಅಂಚೆ ಲಕೋಟೆಯ ಒಳಗೆ ಇರುವ reminder 3 ನೋಟೀಸ್ ಅನ್ನು ನಿಪಿ-17(ಎ) ಎಂದು, ದಿಃ28.06.2017 ರ ಕಾನೂನು ತಿಳುವಳಿಕೆ ನೋಟೀಸ್ ನ ಕಛೇರಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-18 ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-19 ಎಂದು, Refused ಎಂದು ಹಿಂದಿರುಗಿದ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿ ದಿಃ28.06.2017 ರ ನೋಟೀಸ್ ಇದ್ದು, ಸದರಿ ಅಂಚೆ ಲಕೋಟೆಯನ್ನು ನಿಪಿ-20 ಎಂದು ಮತ್ತು ಅಂಚೆ ಲಕೋಟೆಯ ಒಳಗೆ ಇರುವ ನೋಟೀಸ್ ಅನ್ನು ನಿಪಿ-20(ಎ) ಎಂದು, ಟಿ.ಡಿ ರಾಮಚಂದ್ರಮೂರ್ತಿಯವರಿಗೆ ಸಂಬಂದಪಟ್ಟ ಬ್ಯಾಂಕ್ ಅಕೌಂಟ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-21 ಎಂದು ಗುರುತಿಸಲಾಯಿತು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಮುಖ್ಯವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ಶುಭಾ)**

**ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**